ಕರ್ನಾಟಕ ವಿಧಾನಸಭೆ

ಸೋಮವಾರ 20ನೇ ನವೆಂಬರ್ 2000 ರಂದು ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷತೆಯನ್ನು (ಶ್ರೀ ಎಂ.ವಿ. ವೆಂಕಟಪ್ಪ)ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಸಂತಾಪ ಸೂಚಕ

ವಿಷಯ: ಶ್ರೀಯುತ ಕುಬೇರಪ್ಪ ಹನುಮಂತಪ್ಪ ಕುರುಡಗಿಯವರ ನಿಧನ

ಅಧ್ಯಕ್ಷರು :— ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಕುಬೇರಪ್ಪ ಹನುಮಂತಪ್ಪ ಕುರುಡಗಿ ಅವರು 1934ನೇ ಮಾರ್ಚ್ 23ರಂದು ಗದಗ್ ಜಿಲ್ಲೆಯ ಹಾಶನಾಪಿಯಲ್ಲಿ ಜನಿಸಿದ್ದು, ಮೆಟ್ರಿಕ್ಯುಲೇಷನ್‌ವರೆಗೂ ವಿದ್ಯಾಭ್ಯಾಸ ಮಾಡಿದ್ದರು. ವೃತ್ತಿಯಲ್ಲಿ ಕೃಷಿಕರು ಆಗಿದ್ದ ಶ್ರೀಯುತರು ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿಜಯನಗರ ಹೈಸ್ಕೂಲು, ಕರ್ನಾಟಕ ಕುರುಬರ ಸಹಕಾರ ಬ್ಯಾಂಕ್, ರಾಣೆಬೆನ್ನೂರು, ವೂಲನ್ ಮತ್ತು ಕಾಟನ್ ಮಿಲ್ ಹಾಗೂ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಸಂಸ್ಥೆಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಐದನೇ, ಏಳನೇ ಹಾಗೂ ಒಂಬತ್ತನೇ ವಿಧಾನಸಭೆಗೆ ಮುಂಡರಗಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ. ದಿನಾಂಕ: 17-11-2000ರಂದು ನಿಧನ ಹೊಂದಿದ ಶ್ರೀಯುತರಿಗೆ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಎದ್ದು ನಿಂತ ಮೌನವನ್ನಾಚರಿಸಬೇಕೆಂದು ಕೋರಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :— ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಪ್ರಶ್ನೋತ್ತರ ವೇಳೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಪಕ್ಷದ ಪರವಾಗಿ ಮತ್ತು ವಿರೋಧ ಪಕ್ಷದ ನಾಯಕರು ಸಮೇತವಾಗಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಮಾಡಿದಷಂತರ ರಾಜ್ಯದಲ್ಲಿ ಉದ್ಭವಿಸಿರುವಂತಹ ಕಾನೂನು ಸುವ್ಯವಸ್ಥೆ ಮತ್ತು ಅದರ ಬಗ್ಗೆ ಸರ್ಕಾರದ ವ್ಯವಸ್ಥಿತ ರೀತಿಯಾದಂತಹ ನಿಲುವುಗಳನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದರ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ ಇದಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಯ ಮಾಡುತ್ತೇನೆ.